**ದಿನಾಂಕ 05.07.2011 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಧಾನ ಸೌಧ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 6ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

| | | |
|---|---|---|
| 1. ಶ್ರೀ ಕೆ.ಹೆಚ್. ಗೋಪಾಲಕೃಷ್ಣಗೌಡ, ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),<br>ಬೆಂಗಳೂರು | : | ಅಧ್ಯಕ್ಷರು |
| 2. ಶ್ರೀ ಹೇಮರಾಜ್,<br>ಅಧೀನ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಬೆಂಗಳೂರು | : | ಸದಸ್ಯರು |
| 3. ಶ್ರೀ ಭೀಮಪ್ಪ, ಕೆ.ಎ.ಎಸ್<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),<br>ಬೆಂಗಳೂರು | : | ಸದಸ್ಯರು |
| 4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ,<br>ಆನಂದರಾವ್ ವೃತ್ತ, ಬೆಂಗಳೂರು | : | ಸದಸ್ಯರು |
| 5. ಡಾ. ರಾಮಯ್ಯ<br>ನಿರ್ದೇಶಕರು,<br>ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ರಾಯಚೂರು | : | ಸದಸ್ಯರು |
| 6. ಶ್ರೀ ವೆಂಕಟೇಶ್,<br>ಆರ್ಥಿಕ ಸಲಹೆಗಾರರು,<br>ರಿಮ್ಸ್, ರಾಯಚೂರು | : | ಸದಸ್ಯರು |
| 7. ಶ್ರೀ ನಾಗೇಶ್,<br>ಪ್ರಭಾರಿ ಮುಖ್ಯ ಆಡಳಿತಾಧಿಕಾರಿಗಳು,<br>ರಿಮ್ಸ್, ರಾಯಚೂರು | : | ಸದಸ್ಯರು |
| 8. ಶ್ರೀ ವೇಣುಗೋಪಾಲ್<br>ಮೆ॥ ಪಿ.ಕೆ ಸುಬ್ರಮಣ್ಯಂ & ಕಂಪನಿ<br>ಚಾರ್ಟೆಡ್ ಅಕೌಂಟ್‌ಟೆಂಟ್,<br>ರಿಮ್ಸ್ ರಾಯಚೂರು | : | ವಿಶೇಷ ಅಹ್ವಾನಿತರು |

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಬಿಸಿದರು. ಅಜೆಂಡವಾರು ವಿಷಯಗಳನ್ನು ಚರ್ಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 1 : ದಿನಾಂಕ 03.11.2010ರಂದು ಜರುಗಿದ ರಿಮ್ಸ್ ಸಂಸ್ಥೆಯ 5ನೇ ಹಣಕಾಸು ಸಭೆ ನಡುವಳಿಗೆ ಅನುಪಾಲನ ವರದಿಯನ್ನು ಓದಿ ದಾಖಲಿಸುವುದು.**

ದಿನಾಂಕ 03.11.2010ರಂದು ಜರುಗಿದ ನಾಲ್ಕನೇ ಹಣಕಾಸು ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ದಾಖಲಿಸಿ ಅನುಮೋದಿಸಲಾಯಿತು. ಹಾಗು ಪ್ರತಿ ಮೂರು ತಿಂಗಳಿಗೊಮ್ಮೆ ಹಣಕಾಸು ಸಮಿತಿ ಸಭೆಯನ್ನು ಜರುಗಿಸಲು ಸೂಚಿಸಿತು.

**ವಿಷಯ ಸೂಚಿ ಸಂಖ್ಯೆ 2 : ರಿಮ್ಸ್ ಸಂಸ್ಥೆಯ ಅರ್ಥಿಕ ಸ್ಥಿತಿ ದಿನಾಂಕ 01.04.2011 ರಿಂದ 30.06.2011 ರವರೆಗೆ.**

ರಿಮ್ಸ್ ಸಂಸ್ಥೆಯ ಆರ್ಥಿಕ ಸ್ಥಿತಿಯ ಪಟ್ಟಿಯನ್ನು ದಿನಾಂಕ 01.04.2011 ರಿಂದ 30.06.2011ರವರೆಗೆ ಗಮನಿಸಿ ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 3 : ರಿಮ್ಸ್ ಸಂಸ್ಥೆಯ 2011-12 ನೇ ಸಾಲಿನ ಆಯವ್ಯಯ ಮುಂಗಡದ ಅನುಮೋದನೆ ಕುರಿತು**

2011-12ನೇ ಸಾಲಿಗೆ ರಿಮ್ಸ್ ಸಂಸ್ಥೆಗೆ ಯೋಜನೇತರ ಅಡಿಯಲ್ಲಿ ತ್ರೈಮಾಸಿಕವಾಗಿ ರೂ. 1,62,08,000/- ಹಾಗು ವಾರ್ಷಿಕ ರೂ. 6,48,00,000/- ಗಳ ಅನುದಾನ ನಿಗದಿಪಡಿಸಲಾಗಿದ್ದು, ಆದರೆ ವಾಸ್ತವಿಕವಾಗಿ ಸಿಬ್ಬಂದಿ ವೇತನ ಹಾಗು ಕಛೇರಿ ವೆಚ್ಚಕ್ಕಾಗಿ ತ್ರೈಮಾಸಿಕವಾಗಿ ರೂ. 3,91,00,000/- ಹಾಗು ವಾರ್ಷಿಕವಾಗಿ 15,64,00,000/- ಗಳ ಅನುದಾನದ ಅವಶ್ಯಕತೆಯಿದ್ದು, ಅನುದಾನದ ಕೊರತೆಯನ್ನು ಗಮನಿಸಿ ಆರ್ಥಿಕ ಇಲಾಖೆಯ ಪ್ರತಿನಿಧಿಗಳಾಗಿ ಸಭೆಗೆ ಹಾಜರಾದ ಅಧೀನ ಕಾರ್ಯದರ್ಶಿಗಳಿಗೆ ಅನುದಾನದ ಕೊರತೆಯನ್ನು ನೀಗಿಸಲು ಸೂಕ್ತ ಕ್ರಮ ಕೋರಲಾಯಿತು. ಹಾಗು 2011-12 ಸಾಲಿಗೆ ಯೋಜನೇತರ ಅಡಿಯಲ್ಲಿ ಕಾಲೇಜಿಗೆ ರೂ. 15,64,00,000/- ಗಳ ಆಯವ್ಯಯವನ್ನು ಮತ್ತು ಯೋಜನೆ ಅಡಿಯಲ್ಲಿ ಬೋಧಕ ಆಸ್ಪತ್ರೆಗೆ ವಾರ್ಷಿಕವಾಗಿ ನಿಗದಿ ಪಡಿಸಿರುವ ರೂ. 8,58,40,000/- ಆಯವ್ಯಯ ಮುಂಗಡವನ್ನು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 4 : 2010-11ನೇ ಸಾಲಿನಲ್ಲಿ ಯೋಜನೆ ಮತ್ತು ಯೋಜನೇತರ ಅಡಿಯಲ್ಲಿ ಖರ್ಚು ಮಾಡಲಾದ ಅನುದಾನಕ್ಕೆ ಅನುಮೋದನೆ ನೀಡುವ ಕುರಿತು.**

2010-11ನೇ ಸಾಲಿನಲ್ಲಿ ದಿನಾಂಕ 01.04.2010 ರಿಂದ ದಿನಾಂಕ 31.03.2011ರವರೆಗೆ ಯೋಜನೆ ಮತ್ತು ಯೋಜನೇತರ ಅಡಿಯಲ್ಲಿ ಖರ್ಚು ಮಾಡಲಾದ ಲೆಕ್ಕ ಶಿರ್ಷಿಕೆ 2210-05-105-01-40-101 (ಯೋಜನೆ) ಅಡಿಯಲ್ಲಿ ರೂ. 11,08,71,409/- ಗಳು, ಲೆಕ್ಕ ಶಿರ್ಷಿಕೆ 2210-05-105-01-40-101 (ಯೋಜನೇತರ) ಅಡಿಯಲ್ಲಿ ರೂ 5,09,25,586/- ಒಟ್ಟು 2210 ಲೆಕ್ಕ ಶಿರ್ಷಿಕೆ ಯೋಜನೆ ಮತ್ತು ಯೋಜನೇತರಡಿಯಲ್ಲಿ ರೂ. 16,17,96,995/- ಹಾಗು ಲೆಕ್ಕ ಶಿರ್ಷಿಕೆ 4210-03-105-1-02-386 (ಯೋಜನೆ) ರಲ್ಲಿ ರೂ. 6,67,40,930/- ಹೀಗೆ 2210 ಮತ್ತು 4210 ಲೆಕ್ಕ ಶಿರ್ಷಿಕೆಯಡಿಯಲ್ಲಿ ಒಟ್ಟು ರೂ. 22,85,37,925/- ಗಳ ವೆಚ್ಚಗಳನ್ನು ಆರ್ಥಿಕ ಸಮಿತಿ ಸಭೆಯು ಗಮನಿಸಿ ಮಹಾಲೇಖಪಾಲರು, ಬೆಂಗಳೂರು ಇವರು ಲೆಕ್ಕ ಪರಿಶೋಧಗೆ ಒಳಪಟ್ಟು ಸದರಿ ವೆಚ್ಚವನ್ನು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 05 : ಸಂಸ್ಥೆಯ 2005-06, 2006-07, 2007-08, ಮತ್ತು 2008-09ನೇ ಸಾಲಿಗೆ ಚಾರ್ಟೆಡ್ ಅಕೌಂಟೆಂಟರಿಂದ ಮಾಡಿದ ಲೆಕ್ಕಪರಿಶೋಧನಾ ವರದಿಯನ್ನು ಅನುಮೋದಿಸುವ ಕುರಿತು.**

ರಿಮ್ಸ್ ಸಂಸ್ಥೆಯ 2005-06, 2006-07, 2007-08, ಮತ್ತು 2008-09ನೇ ಸಾಲಿಗೆ ಚಾರ್ಟೆಡ್ ಅಕೌಂಟೆಂಟರಿಂದ ಮಾಡಿದ ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು. ಹಾಗು ಇನ್ನು ಮುಂದೆ ಆಯ ಆರ್ಥಿಕ ವರ್ಷದ ನಂತರ ಲೆಕ್ಕ ಪರಿಶೋಧನಾ ವರದಿಯನ್ನು ಕೂಡಲೇ ಕೈಗೊಂಡು ಆರ್ಥಿಕ ಸಮಿತಿ ಸಭೆಯ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಿತು.

**ವಿಷಯ ಸೂಚಿ ಸಂಖ್ಯೆ 6 : ಹಳೆ ಜಿಲ್ಲಾ ಆಸ್ಪತ್ರೆ ರಾಯಚೂರು ಮೊದಲನೇ ಅಂತಸ್ಥಿನ ದುರಸ್ತಿ ಕಾಮಗಾರಿಗೆ ಅನುದಾನ ರೂ. 41.00 ಲಕ್ಷಗಳು ಬಿಡುಗಡೆಯಾಗಿದ್ದು, ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಯಚೂರು ಇವರ ಮುಖಾಂತರ ದುರಸ್ಥಿ ಮಾಡಿಸಲು ಅನುಮತಿ ನೀಡುವ ಕುರಿತು.**

ಹಳೆ ಜಿಲ್ಲಾ ಆಸ್ಪತ್ರೆಯ ಮೊದಲನೇ ಅಂತಸ್ಥಿನ ದುರಸ್ತಿಯ ಕ್ರಮ ಕೈಗೊಳ್ಳಲು ಡಿಸೆಂಬರ್ 2010ರಲ್ಲಿ ಸರ್ಕಾರದಿಂದ ಅನುಮೋದನೆ ನೀಡಿರುವ ಕುರಿತು ಆರ್ಥಿಕ ಸಮಿತಿ ಸಭೆಯು ಗಮನಿಸಿ ವಿಳಂಬ ಕುರಿತು ವಿವರಿಸಲು ಸೂಚಿಸಲಾಗಿ ಸಂಸ್ಥೆಯ ನಿರ್ದೇಶಕರು ಸದ್ಯ ಹಳೆಯ ಬೋಧಕ ಆಸ್ಪತ್ರೆಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಅನುಮೋದನೆಗೆ ಹಾಸಿಗೆಗಳ ಕೊರತೆ ಇರುವ ಕಾರಣ ಹಾಗು ಮೊದಲನೇ ಅಂತಸ್ಥಿನ ದುರಸ್ಥಿಯನ್ನು ಕೈಗೊಳ್ಳಲು ನೆಲ ಮಹಡಿಯನ್ನು ಖಾಲಿ ಮಾಡಬೇಕಾಗಿರುವುದರಿಂದ ಹಾಗು ಹೊಸದಾಗಿ ನಿರ್ಮಿಸುತ್ತಿರುವ 520 ಹಾಸಿಗೆಗಳ ಆಸ್ಪತೆಯು ಇನ್ನು ಪೂರ್ಣಗೊಳ್ಳಬೇಕಾಗಿರುವುದರಿಂದ ಭಾರತೀಯ ವೈದ್ಯಕೀಯ ಮಂಡಳಿಯ ಪ್ರಕಾರ ಅವಶ್ಯವಿರುವ ಹಾಸಿಗೆಗಳಿಗೆ ಸ್ಥಳಾವಕಾಶದ ಕೊರತೆಯ ನಿಮಿತ್ತ ದುರಸ್ಥಿಯ ಕಾರ್ಯವನ್ನು ಪ್ರಾರಂಭಿಸಲು ವಿಳಂಬವಾಗಿರುವುದದಾಗಿ ಸಭೆಗೆ ವಿವರಿಸಿದರು.

ಸುಧೀರ್ಘ ಚರ್ಚೆಯ ನಂತರ ಹಳೆಯ ಜಿಲ್ಲಾ ಆಸ್ಪತ್ರೆಯ ಮೊದಲನೇ ಅಂತಸ್ಥಿನ ದುರಸ್ಥಿ ಕಾಮಗಾರಿಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಯಚೂರು ಇವರ ಮುಖಾಂತರ ನಿಯಮಾನುಸಾರ ಕ್ರಮ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 7 : ನೂತನ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಪೀಠೋಪಕರಣ ಮತ್ತು ಉಪಕರಣ ಖರೀದಿಸಲು ಟೆಂಡರ್ ಪ್ರಕಟಣೆ ಮಾಡಲು ಅನುಮತಿ ಕುರಿತು.**

ನೂತನ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಪೀಠೋಪಕರಣ ಮತ್ತು ಉಪಕರಣ ಖರೀದಿಸಲು ಸಲ್ಲಿಸಿರುವ ರೂ. 6,73,79,412/-ಗಳ ವೆಚ್ಚದ ಅಂದಾಜು ಪಟ್ಟಿಯನ್ನು ಗಮನಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಅಧಿನಿಯಮ 1999 ಹಾಗು ನಿಯಮ 2000ರನ್ವಯ ಟೆಂಡರ್ ಪ್ರಕಟಣೆ ನೀಡಿ ಕ್ರಮ ಕೈಗೊಂಡು ಸರ್ಕಾರದ ಅನುಮೋದನೆ ಪಡೆದು ಖರೀದಿಸಲು ಆರ್ಥಿಕ ಸಮಿತಿ ಸಭೆಯು ಅನುಮೋದನೆ ನೀಡಿತು.

**ವಿಷಯ ಸೂಚಿ ಸಂಖ್ಯೆ 8 : ಎ.ಎಂ.ಇ ದಂತ ಕಾಲೇಜು, ಹಾಗು ಎಸ್‌ಕೆ.ಇ ಎಎನ್‌ಎಂ ತರಬೇತಿ ಸಂಸ್ಥೆ, ರಾಯಚೂರು ಇವರಿಗೆ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಕ್ಲಿನಿಕಲ್ ಸೌಲಭ್ಯ ಪಡೆಯುತ್ತಿರುವ ಕುರಿತು ಘಟನೋತ್ತರ ಮಂಜೂರಾತಿ ನೀಡುವ ಕುರಿತು.**

ಎ.ಎಂ.ಇ ದಂತ ಕಾಲೇಜು, ಹಾಗು ಎಸ್‌ಕೆ.ಇ ಎಎನ್‌ಎಂ ತರಬೇತಿ ಸಂಸ್ಥೆ, ರಾಯಚೂರು ಇವರಿಗೆ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಕ್ಲಿನಿಕಲ್ ಸೌಲಭ್ಯ ಪಡೆಯಲು ಸರ್ಕಾರದಿಂದ ಹೊರಡಿಸಿರುವ ಆದೇಶದನ್ವಯ ನಿಗದಿ ಪಡಿಸಿರುವ ನಿಯಮಗಳನ್ನು ಪರಿಗಣಿಸಿ ಹಾಗು ಪರಿಷ್ಕೃತ ಶುಲ್ಕವನ್ನು ನಿಗದಿ ಪಡಿಸಿ ಕ್ರಮ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 9 : ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ರಿವ್ಯೂ ಸಮಿತಿ ಮೂಲಕ ಪದನ್ನೋತಿ ನೀಡಿರುವ ಬಗ್ಗೆ ಅನುಮೋದನೆ ನೀಡುವ ಬಗ್ಗೆ.**

ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ದಿನಾಂಕ 12.01.2011 ಮತ್ತು ದಿನಾಂಕ 13.05.2011ರಂದು ರಿವ್ಯೂ ಸಮಿತಿ ಮೂಲಕ ಪದನ್ನೋತಿ ನೀಡಿರುವುದನ್ನು ಗಮನಿಸಿ ಆರ್ಥಿಕ ಸಮಿತಿ ಸಭೆಯು ಆಡಳಿತ ಮಂಡಳಿ ಮುಂದೆ ವಿಷಯ ಮಂಡಿಸಲು ಸೂಚಿಸಿತು.

**ವಿಷಯ ಸೂಚಿ ಸಂಖ್ಯೆ 10 : ಭಾರತೀಯ ವೈದ್ಯಕೀಯ ಮಂಡಳಿಯ ಅನುಮತಿಗೆ ಅವಶ್ಯವಿದ್ದ ಬೋಧಕ ಸಿಬ್ಬಂದಿಯನ್ನು ನೇರ ನೇಮಕಾತಿ ಹಾಗು ಆಹ್ವಾನದ ಮುಖಾಂತರ ನೇಮಕಾತಿಯನ್ನು ಆಡಳಿತ ಮಂಡಳಿಯ ಅನುಮೋದನೆಯಂತೆ ಮಾಡಿದ್ದು, ನೇಮಕಾತಿ ಮಾಡಿರುವ ಕುರಿತು ಅನುಮೋದನೆ ನೀಡುವ ಬಗ್ಗೆ.**

ಭಾರತೀಯ ವೈದ್ಯಕೀಯ ಮಂಡಳಿಯ ಅನುಮತಿಗೆ ಅವಶ್ಯವಿದ್ದ ಬೋಧಕ ಸಿಬ್ಬಂದಿಯನ್ನು ಆಹ್ವಾನದ ಮುಖಾಂತರ ಮಾಡಿದ ನೇರ ನೇಮಕಾತಿಯನ್ನು ಆರ್ಥಿಕ ಸಮಿತಿ ಸಭೆಯು ಗಮನಿಸಿ ಅನುಮೋದನೆಗೆ ಆಡಳಿತ ಮಂಡಳಿ ಮುಂದೆ ಮಂಡಿಸಲು ಸೂಚಿಸಿತು.

| Sl. No. | Doctors Name | Designation | Department | Date of Joining |
|---|---|---|---|---|
| 1 | Dr. Shankargouda I Reddy | Assoc. Professor | Skin & VD | 13.01.2011 |
| 2 | Dr. Kiran .K.N | Assoc. Professor | Anasthesia | 13.01.2011 |
| 3 | Dr. Arvind B. Sangavi | Assoc. Professor | ENT | 07.06.2011 |

| Sl. No. | Doctors Name | Designation | Department | Date of Joining |
|---|---|---|---|---|
| 1 | Dr. Sharan Patil | Junior Resident | General Medicine | 04.03.2011 |
| 2 | Dr. Sunil Shanukumar | Junior Resident | General Surgery | 18.03.2011 |
| 3 | Dr. Jyothsna. M | Junior Resident | Pharmacology | 24.03.2011 |
| 4 | Dr. Deepa Veerapur | Junior Resident | Pathology | 24.03.2011 |
| 5 | Dr. Sushma. M.K.M | Junior Resident | Pathology | 24.03.2011 |
| 6 | Dr. Ravikumar.S | Junior Resident | Paediatrics | 12.05.2011 |
| 7 | Dr. S.R. Jamadagni | Junior Resident | General Surgery | 28.05.2011 |
| 8 | Dr. Mohd. Ismail | Junior Resident | General Medicine | 27.05.2011 |
| 9 | Dr. Krishnedra. M.G | Senior Resident | Anesthesia | 23.06.2011 |

**ವಿಷಯ ಸೂಚಿ ಸಂಖ್ಯೆ 11 : ಶ್ರೀ ವೆಂಕಟೇಶ್, ನಿವೃತ್ತ ಜಿಲ್ಲಾ ಖಜಾನೆ ಅಧಿಕಾರಿಗಳು ಇವರನ್ನು ರಿಮ್ಸ್ ಸಂಸ್ಥೆಯಲ್ಲಿ ಆರ್ಥಿಕ ಸಲಹೆಗಾರರನ್ನಾಗಿ ನೇಮಿಸಿರುವ ಕುರಿತು ಅನುಮೋದನೆ ನೀಡುವ ಬಗ್ಗೆ.**

ರಿಮ್ಸ್ ಸಂಸ್ಥೆಗೆ ಸರ್ಕಾರದಿಂದ ಮಂಜೂರಾಗಿರುವ ಆರ್ಥಿಕ ಸಲಹೆಗಾರರ ಹುದ್ದೆಯನ್ವಯ ಶ್ರೀ ವೆಂಕಟೇಶ್, ನಿವೃತ್ತ ಜಿಲ್ಲಾ ಖಜಾನೆ ಅಧಿಕಾರಿಗಳು, ಇವರನ್ನು ರಿಮ್ಸ್ ಸಂಸ್ಥೆಯ ಆರ್ಥಿಕ ಸಲಹೆಗಾರರನ್ನಾಗಿ ಸಂಚಿತ ವೇತನ ರೂ. 15,000/– ನಿಗದಿ ಪಡಿಸಿ ತಾತ್ಕಲಿಕವಾಗಿ ಮಾಡಿರುವ ನೇಮಕಾತಿಯನ್ನು ಗಮನಿಸಿ ಆರ್ಥಿಕ ಸಮಿತಿಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 12 : ಶ್ರೀಮತಿ ಯಶೋಧ. ಟಿ ಶುಶ್ರೂಷಕ ಅಧೀಕ್ಷಕರು ದರ್ಜೆ - 01 ಇವರು ದಿನಾಂಕ 30.06.2011ರಂದು ವಯೋ ನಿವೃತ್ತಿ ಹೊಂದಲಿದ್ದು, ಮರು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.**

ರಿಮ್ಸ್ ಸಂಸ್ಥೆಯಲ್ಲಿ ಖಾಲಿ ಇರುವ ಶುಶ್ರೂಷಕ ಅಧೀಕ್ಷಕರು ದರ್ಜೆ –1 ಹುದ್ದೆಗೆ ದಿನಾಂಕ 30.06.2011ರಂದು ವಯೋನಿವೃತ್ತಿ ಹೊಂದಿದ ಶ್ರೀಮತಿ ಯಶೋಧ. ಟಿ ಶುಶ್ರೂಷಕ ಅಧೀಕ್ಷಕರು ದರ್ಜೆ - 01 ಇವರ ಉತ್ತಮ ಸೇವೆಯನ್ನು ಪರಿಗಣಿಸಿ 11 ತಿಂಗಳ ಅವಧಿಗೆ ಸಂಚಿತ ವೇತನ ರೂ. 15,000/– ನಿಗದಿ ಪಡಿಸಿ ತಾತ್ಕಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 13 : ಸಂಚಿತ ವೇತನದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ವೈದ್ಯಕೀಯ ದಾಖಲೆ ಅಧಿಕಾರಿಗಳು (A.M.R.O) ಹುದ್ದೆಯ ಮೂಲ ವೇತನಕ್ಕೆ ರೂ. 100/-ಗಳನ್ನು ಕಡಿಮೆ ಮಾಡಿ ವೇತನ ನೀಡುವ ಕುರಿತು.**

ಸದರಿ ಪ್ರಸ್ತಾವನೆಯನ್ನು ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಮಂಡಿಸಲು ಆರ್ಥಿಕ ಸಮಿತಿ ಸಭೆಯು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 14 : ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಡಿ ನೌಕರರಿಗೆ ದಿನಾಂಕ 16.08.2007 ರಿಂದ ಪ್ರಾವಿಡೆಂಟ್ ಫಂಡ್‌ನ್ನು ಪಾವತಿಸಲು ಅನುಮತಿ ನೀಡುವ ಕುರಿತು.**

ಸದರಿ ವಿಷಯವನ್ನು ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಮಂಡಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 15 : ಅಂಬ್ಯುಲೆನ್ಸ್ ವಾಹನ ಚಾಲನೆಗಾಗಿ ಹಾಗೂ ಇತರ ತುರ್ತು ಕಾರ್ಯಕ್ಕಾಗಿ ಐದು (5) ವಾಹನ ಚಾಲಕರನ್ನು ಹುದ್ದೆಯ ಮೂಲ ವೇತನಕ್ಕೆ ರೂ. 100/-ಗಳನ್ನು ಕಡಿಮೆ ಮಾಡಿ ವೇತನ ನೀಡುವ ಕುರಿತು.**

ಅಬ್ಯುಲೆನ್ಸ್ ಹಾಗು ಇತರ ವಾಹನಗಳಿಗೆ ಅವಶ್ಯವಿರುವ ವಾಹನ ಚಾಲಕರನ್ನು ಹೊರಗುತ್ತಿಗೆಯ ಮೂಲಕ ನೇಮಕಾತಿ ಮಾಡಿಕೊಳ್ಳಲು ಅಥವಾ ಮಂಜೂರಾದ ಖಾಲಿ ಹುದ್ದೆಗಳನ್ನು ಪರಿಗಣಿಸಿ ಖಾಯಂ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 16 : ರಿಮ್ಸ್ ಸಂಸ್ಥೆಯ ಅವರಣದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್ ಇವರಿಗೆ ಬ್ಯಾಂಕ್ ನಿರ್ಮಿಸಲು ಸ್ಥಳ ನೀಡುವ ಕುರಿತು ಅನುಮೋದನೆ ನೀಡುವ ಬಗ್ಗೆ.**

ಸ್ಥಳ ಪರಿಶೀಲಸಿ ನಿರ್ಣಯಿಸಲು ತೀರ್ಮಾನಿಸಿ ವಿಷಯವನ್ನು ಮುಂದೂಡಲಾಯಿತು.

**ವಿಷಯ ಸೂಚಿ ಸಂಖ್ಯೆ 17 : ವಿದ್ಯಾರ್ಥಿಗಳ ವ್ಯಾಸಂಗಕ್ಕಾಗಿ ಕರೆದೊಯ್ಯಲು ಬೇಕಾಗುವ ಬಸ್ಸನ್ನು ಖರೀದಿಸಿರುವ ಬಗ್ಗೆ ಹಾಗು ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್, ರಾಯಚೂರು ಇವರಿಂದ ಕೊಡುಗೆಯಾಗಿ ನೀಡಿದ ಮಿನಿ ಬಸ್ಸಿನ ಕುರಿತು ಅನುಮೋದನೆ ನೀಡುವ ಬಗ್ಗೆ.**

ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್ ಇವರಿಂದ ಕೊಡುಗೆಯ ರೂಪದಲ್ಲಿ ಪಡೆದಿರುವ 25 + 1 ಆಸನವುಳ್ಳ ಟಾಟ ಮಿನಿ ಬಸ್ಸನ್ನು ಪಡೆದಿರುವ ಕುರಿತು ಮತ್ತು ರೂ. 13,67,260/- ಗಳ ವೆಚ್ಚದಲ್ಲಿ 45 + 1 ಆಸನವುಳ್ಳ ಬಸ್ಸನ್ನು ಖರೀದಿಸಿರುವ ಕುರಿತು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 18 : ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರಿನಲ್ಲಿ ನಗರಸಭೆ ಗುತ್ತಿಗೆದಾರರಿಂದ ಹೊರ ಗುತ್ತಿಗೆಯ ಮೂಲಕ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುತ್ತಿರುವ ಶ್ರೀ ನಾಗಿರೆಡ್ಡಿ ತಂದೆ ಕೃಷ್ಣ ರೆಡ್ಡಿ ಇವರ ಸೇವೆಯನ್ನು 3 ತಿಂಗಳ ಅವಧಿಗೆ ಮುಂದುವರೆಸುವ ಕುರಿತು ಅನುಮೋದನೆ ನೀಡುವ ಬಗ್ಗೆ.**

ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರಿನಲ್ಲಿ ನಗರಸಭೆ ಗುತ್ತಿಗೆದಾರರಿಂದ ಹೊರ ಗುತ್ತಿಗೆಯ ಮೂಲಕ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುತ್ತಿರುವ ಶ್ರೀ ನಾಗಿರೆಡ್ಡಿ ತಂದೆ ಕೃಷ್ಣ ರೆಡ್ಡಿ ಇವರ ಸೇವೆಯನ್ನು 3 ತಿಂಗಳ ಅವಧಿಗೆ ಮುಂದುವರೆಸಲು ಮತ್ತು ಜಾರಿಯಲ್ಲಿರುವ ಕನಿಷ್ಟ ವೇತನವನ್ನು ಪಾವತಿಸಲು ಆರ್ಥಿಕ ಸಮಿತಿ ಸಭೆಯು ತೀರ್ಮಾನಿಸಿ ಕೂಡಲೇ ಹೊಸದಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರರರ್ದರ್ಶಕ ಅಧಿನಿಯಮ 1999 ಹಾಗು ನಿಯಮ 2000ರನ್ವಯ ಟೆಂಡರ್ ಪ್ರಕಟಣೆ ನೀಡಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 19 : ಈ ಸಂಸ್ಥೆಯ ಉತ್ತಮ ಪ್ರಗತಿಗಾಗಿ ಸಂಪನ್ಮೂಲ ನಿರ್ವಹಣಾ ಪದ್ಧತಿ ತಂತ್ರಾಂಶ (Campus Resources Management System Software) ನ್ನು ಅಳವಡಿಸಲು ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000ರನ್ವಯ ಕೈಗೊಂಡ ಕ್ರಮದ ಬಗ್ಗೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು.**

ಸಂಸ್ಥೆಯ ಉತ್ತಮ ಪ್ರಗತಿಗಾಗಿ ಸಂಪನ್ಮೂಲ ನಿರ್ವಹಣಾ ಪದ್ಧತಿ ತಂತ್ರಾಂಶ (Campus Resources Management System Software) ನ್ನು ಅಳವಡಿಸಲು ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000ರನ್ವಯ ಕೈಗೊಂಡ ಕ್ರಮದ ಬಗ್ಗೆ ಸಂಸ್ಥೆಗೆ ಭೇಟಿ ನೀಡಿ ಅದರ ಕಾರ್ಯ ಕ್ಷಮತೆ ಪರಿಶೀಲಿಸಿ ಆಡಳಿತ ಮಂಡಳಿಗೆ ಸೂಕ್ತ ಅಭಿಪ್ರಾಯ ನೀಡಲು ತೀರ್ಮಾನಿಸಿತು.

**ವಿಷಯ ಸೂಚಿ ಸಂಖ್ಯೆ 20 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು**

**1) ಮಹಾಲೇಖಪಾಲರು, ಬೆಂಗಳೂರು ಇವರು ಶ್ರೀ ಶೇಖರ್ ಇವರನ್ನು ಪ್ರ.ದ.ಸ ಹುದ್ದೆಗೆ ನೇಮಕಾತಿ ಮಾಡಿರುವ ಕುರಿತು ಆಕ್ಷೇಪಣೆಯನ್ನು ಸಲ್ಲಿಸಿರುವ ಕಾರಣ ಪ್ರ.ದ.ಸ. ಹುದ್ದೆಯಿಂದ ದ್ವಿ.ದ.ಸ ಹುದ್ದೆಗೆ ಹಿಂಬಡ್ತಿ ನೀಡುವ ಬಗ್ಗೆ.**

ಶ್ರೀ ಶೇಖರ್, ಪ್ರ.ದ.ಸ ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ದ್ವಿ.ದ.ಸ ಹುದ್ದೆಗೆ ಹಿಂಬಡ್ತಿ ನೀಡಿ ನೇಮಕಗೊಂಡ ದಿನಾಂಕದಿಂದ ಪ್ರ.ದ.ಸ ಹುದ್ದೆಯಲ್ಲಿ ಪಡೆದ ಹೆಚ್ಚುವರಿ ವೇತನದ ವ್ಯತ್ಯಾಸದ ಮೊತ್ತವನ್ನು ಮರು ಸಂದಾಯ ಮಾಡಲು ನೋಟೀಸ್ ಜಾರಿ ಮಾಡಿ ಕ್ರಮ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**2) ರಿಮ್ಸ್ ಬೋಧಕ ಆಸ್ಪತ್ರೆಗೆ ತುರ್ತು ಚಿಕಿತ್ಸಾ ಉಪಕರಣಗಳ ಅಳವಡಿಕೆಯೊಂದಿಗೆ ಸುಸಜ್ಜಿತ ಹೊಸ ಅಂಬ್ಯುಲೆನ್ಸ್ ವಾಹನ ಖರೀದಿಸುವ ಕುರಿತು.**

ರಿಮ್ಸ್ ಸಂಸ್ಥೆಯಲ್ಲಿ ವಾಹನ ಚಾಲಕರ ಕೊರತೆಯಿರುವುದರಿಂದ ಖಾಲಿ ಇರುವ ವಾಹನಾ ಚಾಲಕರ ಹುದ್ದೆಯಲ್ಲಿ ಖಾಯಂ ನೇಮಕಾತಿ ಮಾಡಿದ ನಂತರ ಸುಸಜ್ಜಿತ ಹೊಸ ಅಂಬ್ಯುಲೆನ್ಸ್ ವಾಹನ ಖರೀದಿಸಲು ಕ್ರಮ ಕೈಗೊಳ್ಳುವಂತೆ ಆರ್ಥಿಕ ಸಮಿತಿ ಸಭೆಯು ತೀರ್ಮಾನಿಸಿತು.

**3) ರಿಮ್ಸ್ ಸಂಸ್ಥೆಯ ಅವರಣದಲ್ಲಿ ನಿರ್ಮಾಣವಾಗುತ್ತಿರುವ ಘನ ದ್ರವ ತ್ಯಾಜ್ಯ ಘಟಕಕ್ಕೆ ಒಳಚರಂಡಿ ನಿರ್ಮಿಸಲು ಅನುಮತಿ ನೀಡುವ ಕುರಿತು.**

ಘನ ದ್ರವ್ಯ ತ್ಯಾಜ್ಯ ವಸ್ತುಗಳ ಘಟಕವನ್ನು ಸ್ಥಾಪಿಸುತ್ತಿರುವ ಕುರಿತು ಚರ್ಚಿಸಿ ಅವಶ್ಯವಿರುವ ಒಳಚರಂಡಿ ಕಾರ್ಯವನ್ನು ರೂ. 67,80,000/-ಗಳ ವೆಚ್ಚದಲ್ಲಿ ನಿಯಮಾನುಸಾರ ಟೆಂಡರ್ ಪ್ರಕಟಣೆ ನೀಡಿ ಸರ್ಕಾರದ ಅನುಮೋದನೆ ಪಡೆದು ಕ್ರಮ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

**4) ಭಾರತೀಯ ವೈದ್ಯಕೀಯ ಮಂಡಳಿಯ 5ನೇ ಹಂತದ ನವೀಕರಣಕ್ಕಾಗಿ 2011–12ನೇ ಸಾಲಿಗಾಗಿ ಬೇಕಾಗುವ ವೈದ್ಯಕೀಯಪುಸ್ತಕ ಹಾಗು ಜರ್ನಲ್ಸ್‌ಗಳನ್ನು ಎಕ್ಸಿಬೀಷನ್ ಕಂ ಸೇಲ್ ಮುಖಾಂತರ ಖರೀದಿಸುವ ಕುರಿತು.**

ಭಾರತೀಯ ವೈದ್ಯಕೀಯ ಮಂಡಳಿಯ 5ನೇ ಹಂತದ ನವೀಕರಣಕ್ಕಾಗಿ 2011–12ನೇ ಸಾಲಿಗೆ ಅವಶ್ಯವಿರುವ ವೈದ್ಯಕೀಯ ಪುಸ್ತಕ ಹಾಗು ಜರ್ನಲ್ಸ್‌ಗಳನ್ನು ಎಕ್ಸಿಬೀಷನ್ ಕಂ ಸೇಲ್ ಮುಖಾಂತರ ಖರೀದಿಸಿ ಕ್ರಮ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಿತು.

ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

(ಕೆ.ಹೆಚ್ ಗೋಪಾಲಕೃಷ್ಣಗೌಡ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಗೋಪಾಲಕೃಷ್ಣೇ ಗೌಡ ಕೆ.ಹೆಚ್.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)